ಚಲಿಸುತ್ತಿದ್ದರು.

ಸಂತೆಗಳು ಹೆಚ್ಚಾಗಿ ನಡೆಯುವುದು ಬಯಲಿನಲ್ಲಿ. ಅಥವಾ ದೇವಾಲಯದ ಆಸುಪಾಸು. ವಿಶಾಲವಾದ ಮರಗಳ ಕೆಳಗೆ. ಸಂತೆ ಎಂದರೆ ಅಲ್ಲಿ ತರಕಾರಿ, ಹಣ್ಣುಹಂಪಲು, ದಿನಸಿ, ನಿತ್ಯಬಳಕೆಯ ವಸ್ತುಗಳು ದೊರಕುತ್ತವೆ ಎಂಬಲ್ಲಿಗೆ ಸಂತೆಗಳು ಸೀಮಿತವಾಗಿಲ್ಲ. ಬದಲಾಗಿ ಬಣ್ಣಬಣ್ಣದ ಸಾಕ್ರೇನ್‌ಯುಕ್ತ ಮಿಠಾಯಿಗಳನ್ನು, ಬಾಂಬೆ ಮಿಠಾಯಿಗಳನ್ನು, ಸೈಕಲ್‌ನಲ್ಲಿ ಪೆಟ್ಟಿಗೆ ಇರಿಸಿ ಐಸ್ ಕ್ಯಾಂಡಿಗಳನ್ನು, ಬಲೂನು, ಗಿರ್‌ಮಿಟ್, ಸಿಹಿ ಪಾನಕ, ಆಟಿಕೆಗಳನ್ನು ಮಾರುವ ಮಕ್ಕಳ ಜಗತ್ತಿನ ಅತ್ಯಂತ ಪ್ರೀತಿಯ ತಾಣ.

**ಕಬ್ಬಿಣ ಕೈಕಡಗ, ಕುಣಿಗೋಲು, ಕೂದಲು**
**ಕಂಬಳಿ ಹೊದ್ದಾಂವ ಬಂದಾನ!**
**ಗುಣುಗುಣುಗುಟ್ಟುತ ಕಡಗವ ಕುಟ್ಟುತ**
**ಕರಡಿಯನಾಡಿಸುತ ನಿಂದಾನ!**

ಎಂಬ ವರಕವಿ ಬೇಂದ್ರೆಯವರ 'ಕರಡಿ ಕುಣಿತ' ಪದ್ಯ ಎಲ್ಲರಿಗೂ ಗೊತ್ತಿರಬಹುದು. ನಾನು ಓದುವಾಗ ಈ ಪದ್ಯ ಐದನೇ ತರಗತಿಯಲ್ಲಿ ಪಠ್ಯವಾಗಿತ್ತು. ನಿಜವಾಗಿಯೂ ಕರಡಿ ಕುಣಿಸುವ ಮತ್ತು ಅದು ಕುಣಿಯುವ ಕುರಿತ ಯಾವುದೇ ದೃಶ್ಯ ಅನುಭವ ನನಗಿರಲಿಲ್ಲ. ಅದರ ನಿಜವಾದ ಅನುಭವ ದೊರೆತದ್ದು ಒಮ್ಮೆ ನಮ್ಮೂರ ಸಂತೆಗೆ ಕರಡಿ ಕುಣಿಸುವಾತ ಬಂದಾಗಲೇ. ಕರಡಿಯ ಬಾಯಿಗೆ ಹಗ್ಗ ಬಿಗಿದು, ಕುಣಿಸುವಾತನ ಎಲ್ಲಾ ಆಜ್ಞೆಗಳನ್ನು ಪಾಲಿಸುವ ಕರಡಿಯನ್ನು ನೋಡಿದಾಗ ಮಕ್ಕಳಾದ ನಮಗೆಲ್ಲಾ ಏನೋ ಸಂಭ್ರಮ. ಕರಡಿಯನ್ನು ಮುಟ್ಟಿದರೆ ಮಕ್ಕಳಲ್ಲಿರುವ ಭಯ ಹೊರಟು ಹೋಗುತ್ತದೆ. ಅದರ ರೋಮವನ್ನು ತಾಯತವಾಗಿ ಕಟ್ಟಿಕೊಂಡರೆ ಧೈರ್ಯ ಮತ್ತಷ್ಟು ವೃದ್ಧಿಸುತ್ತದೆ ಎಂಬ ನಂಬಿಕೆಯಿಂದ ನಮ್ಮೂರಿನ ಜನ ಪುಟಾಣಿ ಮಕ್ಕಳನ್ನು ಕರಡಿ ಕುಣಿಸುವಾತನಲ್ಲಿಗೆ ಕರೆದೊಯ್ದು ಕರಡಿ ಬೆನ್ನಿನ ಮೇಲೆ ಕೂರಿಸುವುದೇನೂ, ಆ ಮಕ್ಕಳು ಕರಡಿಯನ್ನು ಕಂಡು ಅಳುವುದೇನೂ, ಅದರ ಕೂದಲಿನ ತಾಯತಕ್ಕಾಗಿ ಬೆಲೆಯಲ್ಲಿ ತಾಯಂದಿರು ಚೌಕಾಸಿ ನಡೆಸುವುದೇನೂ ಎಲ್ಲವೂ ಸಂತೆಯಲ್ಲಿ ಘಟಿಸುವುದೇ ಆಗಿತ್ತು. ಕರಡಿಯನ್ನು ಕುಣಿಸುತ್ತ ಸಂತೆ, ಬೀದಿ, ಮನೆ, ವಠಾರಗಳನ್ನು ಸುತ್ತುವ ಕುಣಿಸುವಾತನಿಗೆ ಹಣದ, ಧಾನ್ಯಗಳ ರೂಪದಲ್ಲಿ ಏನನ್ನಾದರೂ ನೀಡಬೇಕಿತ್ತು. ಇದೊಂದು ಬಗೆಯ ಭಿಕ್ಷಾಟನೆಯ ರೂಪದಂತೆಯೂ, ಕರಡಿಯನ್ನು ಶೋಷಣೆಗೆ ಒಡ್ಡುವ ತಂತ್ರದಂತೆಯೂ, ವನ್ಯ ಸಂರಕ್ಷಣೆಯ ಮಾದರಿಗೆ ವಿರುದ್ಧವಾಗಿ ಕಾಣಿಸಿದ ಹಿನ್ನೆಲೆಯಲ್ಲಿ ಪ್ರಸ್ತುತ ಕರಡಿ ಕುಣಿಸುವುದು, ಪಳಗಿಸುವುದು ಶಿಕ್ಷಾರ್ಹ ಅಪರಾಧವಾಗಿದೆ.

**'ಮಾವಿನಾಟದ, ಹಾವಿನಾಟದ ಸೋವು ಸೋಜಿಗ ತಿಳಿಯದು!**
**ಯಾವ ತಂತ್ರವೊ? ಮೋಡಿ ಮಂತ್ರವೋ? ನಾವು ಅರಿಯೆನು' ಎಂದರು**
**ಬಿದಿರು ಒಂದನು ಹೊತ್ತು ತಂದನು ಮುದುಕ ಡೊಂಬನು ಹೆಗಲಲಿ**
**ಅದನು ಬಲದಲಿ ಹೂಡಿ ನೆಲದಲಿ, ಚದುರೆ ಮಗಳನು ಕರೆದನು**
**ಹೆಣ್ಣು ಬಂದಳು ಹಣ್ಣು ಬಿಡದಾ ಸಣ್ಣ ಬಳ್ಳಿಯ ಬೆಡಗಿನಾ,**
**ಮಣ್ಣೊಳಾಡುವ ಬೆಣ್ಣೆಯಂತಿಹ, ಕಣ್ಣುಕಟ್ಟಿನ ಸೊಬಗಿನಾ,**
**ಮಣಿದು, ಹಗ್ಗಕೆ ಹಾರಿ ಸಿಡಿದಳು ಕುಣಿವ ಮರಿಸಿಡಿಲಂತೆಯೇ,**
**ಹೆಣೆದು ಮೈಯನು, ಹಾವಿನಂತೆಯೆ ಗಣೆಗೆ ಸರಿದಳು ಸರ್‍ರನೆ**
**ಬಳಿಕ ಬೆನ್ನನು ಕೋದು, ಕೈಕಾಲ್ಗಳನ್ನು ತೇಲಿಸಿ, ಹೊಳೆದಳು-**
**ಮೆಳೆಯ ಬಿಲ್ಲಿನ ಹಾಗೆ, ಸ್ಥಾಣುವಿನೆಳೆಯ ಚಂದ್ರನ ಚಂದದಿ**

ಎಂಬ ಪಂಜೆ ಮಂಗೇಶರಾಯರ 'ದೊಂಬರ ಚೆನ್ನೆ' ಪದ್ಯದಲ್ಲಿ ಬರುವಂತೆ ನಮ್ಮೂರ ಸಂತೆಗೂ ದೊಂಬರಾಟ ಆಡಲು ಬರುವ ತಂಡ ಹಲವಿದ್ದವು. ಕೆಲವು ಬಾರಿ ಈ ತಂಡಗಳು ವಾರಾನುಗಟ್ಟಲೆ ನಮ್ಮೂರಿನಲ್ಲೇ ನೆಲೆ ನಿಂತಿರುತ್ತಿದ್ದವು. ವಲಸಿಗ ಸಮುದಾಯದ ಈ ದೊಂಬರಾಟ ಆಡುವವರು ಚರ್ಮವಾದ್ಯಗಳ ಜೊತೆಯಲ್ಲಿ ಟೆಂಟು ಹಾಕಲಿರುವ ಬಿದಿರಿನ ಕಂಬಗಳನ್ನು, ಕಬ್ಬಿಣದ ಚಕ್ರಗಳನ್ನು, ಹಗ್ಗಗಳನ್ನು, ತಮ್ಮ ಬಟ್ಟೆಬರೆ, ಪಾತ್ರೆಪಗಡೆಗಳ ಗಂಟುಮೂಟೆಗಳನ್ನು ಹೊತ್ತುಕೊಂಡು ಊರೂರು ತಿರುಗುತ್ತಾರೆ. ಇವರು ಹೆಚ್ಚಾಗಿ ತಳಸಮುದಾಯಕ್ಕೆ